

ಹವ್ಯಾಸಿ ಪತ್ರಕರ್ತರೂ ಕಥೆಗಾರರೂ ಆಗಿದ್ದ ಪ್ರೊ. ಶಿವ ಬಿಲ್ಲವ ಅವರದು ಮುಂಬೈ ಕನ್ನಡಿಗರ ವಲಯದಲ್ಲಿ ಜನಪ್ರಿಯ ಹೆಸರು. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಅವರು, ಹಲವು ಕಾಲೇಜುಗಳಲ್ಲಿ ಬೋಧಕರಾಗಿ ಕಾರ್ಯ ನಿರ್ವಹಿಸಿದ್ದರು. ಕನ್ನಡದ ಜೊತೆಗೆ ಇಂಗ್ಲಿಷ್‌ನಲ್ಲೂ ಬರೆಯುತ್ತಿದ್ದರು; ಮುಂಬೈ ಮತ್ತು ಕರ್ನಾಟಕದ ನಡುವಿನ ಸಾಂಸ್ಕೃತಿಕ ರಾಯಭಾರಿಯಂತಿದ್ದರು. ಕೋಟಿ–ಚೆನ್ನಯರ ಬಗೆಗಿನ 'ಲೆಜೆಂಡರಿ ಟ್ವಿನ್ಸ್' ಅವರ ಪ್ರಸಿದ್ಧ ಪುಸ್ತಕ. ಬಹುಮುಖ ಪ್ರತಿಭೆಯ ಈ ಸವ್ಯಸಾಚಿ ಇತ್ತೀಚೆಗೆ ಮುಂಬೈನಲ್ಲಿ ನಿಧನರಾಗಿದ್ದಾರೆ. 'ಸುಧಾ'ಕ್ಕೆ ಅವರು ಇತ್ತೀಚೆಗೆ ಕಳುಹಿಸಿದ ಈ ಕಥೆ ಶ್ರದ್ಧಾಂಜಲಿ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ. –ಸಂ

ಎಲ್ಲಾ ಮೂಲಭೂತ ಸೌಕರ್ಯಗಳು ಕ್ಯಾಂಪ್‌ನಲ್ಲಿ ಇರುತ್ತವೆ ಎಂದು ನಮೂದಿಸಲಾಗಿತ್ತು.

ಎರಡು ತಿಂಗಳ ನಂತರ ನಳಿನಿ ಮುಂಬೈ ಪೊಲೀಸ್ ಕ್ಯಾಂಪ್‌ನ ಹಾಸ್ಟೆಲ್‌ಗೆ ಬಂದಳು. ಕ್ಯಾಂಪ್‌ಗೆ ಅವಳು ಬಂದ ನಂತರ ಒಂದು ಒಂದು ಕರಪತ್ರವನ್ನು ಗಮನಿಸಿದಳು. 'ಭಾನುವಾರ ಮೂರರಿಂದ ಆರು ಗಂಟೆಯವರೆಗೆ ನಿಮ್ಮ ಸಂಬಂಧಿಕರು ಹಾಸ್ಟೆಲ್‌ಗೆ ಬರಬಹುದು' ಎಂದು ತಿಳಿಸಿತ್ತು. ಶೌಖತ್‌ಗೆ ನಳಿನಿ ಈ ವಿಷಯ ತಿಳಿಸಿದಳು. ಆ ಆದಿತ್ಯವಾರ ಶೌಖತ್ ಖುಷಿ ಖುಷಿಯಲ್ಲಿ ಅವಳಿಗೆ ಸಿಗಲಿಕ್ಕೆಂದು ಪೊಲೀಸ್ ಕ್ಯಾಂಪ್‌ಗೆ ಹೋದ.

ಕ್ಯಾಂಪ್‌ಗೆ ಹೋಗಿ ಚೌಕಿದಾರನಿಗೆ ನಳಿನಿ ಬಗ್ಗೆ ವಿಚಾರಿಸಿದ. 'ಅವಳು ಮೆಸ್‌ನಲ್ಲಿ ಬೇಯಿಸಿದ ಮೊಟ್ಟೆ ಮತ್ತು ಹಾಲು ಸೇವಿಸುತ್ತಿದ್ದಾಳೆ' ಎಂದು ಚೌಕಿದಾರ ಹೇಳಿದ. ಹತ್ತು ಹದಿನೈದು ನಿಮಿಷಗಳ ನಂತರ ನಳಿನಿ ಪ್ರತ್ಯಕ್ಷಳಾದಳು. ಅವರಿಬ್ಬರೂ ಸಿಗದೆ ಎರಡು ತಿಂಗಳಾಗಿತ್ತು. ಶೌಖತ್ ಅವಳನ್ನು ಕಂಡೊಡನೆ, 'ಓಹೋ... ಸೂಪರ್ ಫಿಟ್ ಆಗಿದ್ದಿ, ಪೂರ್ಣ ಬೊಜ್ಜು ಕರಗಿದೆ' ಎಂದು ನಗುತ್ತ ಹೇಳಿದ. 'ಪ್ರತಿ ದಿನ ಕಸರತ್ತು ಮಾಡಿ ಮಾಡಿ ಹೀಗೆ ಆದದ್ದು' ಎಂದಳು. ಅಲ್ಲಿಂದ ಶೌಖತ್ ಮತ್ತು ನಳಿನಿ ಕ್ಯಾಂಪ್‌ನಿಂದ ಹೊರಗೆ ಬಂದು ಹತ್ತಿರದಲ್ಲೇ ಇರುವ ಆರ್ಯ ಕಾಲೋನಿಯತ್ತ ಹೋದರು. ಅಲ್ಲಿ ಛೋಟಾ ಕಾಶ್ಮೀರ್ ಎಂಬ ಸುಂದರ ಹೂತೋಟದತ್ತ ಜೊತೆಜೊತೆಗೆ ನಿಧಾನ ನಡೆದುಕೊಂಡು ಹೋದರು. ಅದು ಹದಿಹರೆಯದವರ ಪ್ರೇಮತಾಣ. ಇನ್ನೂ ಕೆಲವು ಪಡ್ಡೆ ಮಂದಿ ಮೊಬೈಲ್‌ನಲ್ಲಿ ಮುಖ ಹುದುಗಿಸಿ ಯೂಟ್ಯೂಬ್‌ನಲ್ಲಿ ಏನನ್ನೋ ನೋಡುತ್ತ ಮೈಮರೆತಿದ್ದರು. ಅಲ್ಲೊಂದು ಕಡೆ ಬಿಸಿ ಬಾಣಲೆಯಲ್ಲಿ ಪಾಪ್ ಕಾರ್ನ್ ಪಟಾಪಟ್ ಅಂತ ಬೇಯುತಿತ್ತು. ಅಲ್ಲೇ ದೂರದಲ್ಲಿ ಪ್ರಸಿದ್ಧವಾದ ಫಿಲ್ಮ್ ಸಿಟಿ ಇದೆ. ಇಬ್ಬರೂ ಸುತ್ತಾಡಿ ಅತ್ತ ಹೋದಾಗ ಅಲ್ಲಿ ಯಾವುದೋ ಜಾಹೀರಾತಿಗೆ ಅಮಿತಾಭ್ ಬಚ್ಚನ್ ಶೂಟಿಂಗ್ ನಡೆಯುತಿತ್ತು.

ಅಲ್ಲಿ ಹಲವಾರು ರಸ್ತೆ ಬದಿ ಅಂಗಡಿಗಳು ಇದ್ದವು. ಒಂದು ಕಡೆ ಮದ್ರಾಸಿ ಕಟ್ಟಾಪ್ಪ, ಮಸಾಲಾ ದೋಸೆ, ವಡಾ, ಸಮೋಸ ಮತ್ತು ಪಕೋಡಾ ಅಂತ ಗಿರಾಕಿಗಳನ್ನು ಸೆಳೆಯುತಿದ್ದ. ಶೌಖತ್‌ಗೆ ಹಸಿವಾಗುತಿತ್ತು. ಏನಾದರೂ ತಿನ್ನೋಣವೇ ಅಂದ. ಆಕೆ ಆಗಬಹುದು ಎಂಬಂತೆ ತಲೆಯಾಡಿಸಿದಳು. ಅವಳಿಗಿಷ್ಟವಾದ ಸಮೋಸಾ, ಇವನಿಗೆ ಮಸಾಲಾ ದೋಸೆ ತಿನ್ನತೊಡಗಿದರು. ಪಕ್ಕದ ಐಸ್‌ಕ್ರೀಮ್ ಸ್ಟಾಲಿನಲ್ಲಿ ಒಂದಷ್ಟು ಹುಡುಗಿಯರು ಐಸ್‌ಕ್ರೀಮ್ ತಿನ್ನುತ್ತಿದ್ದರು. ಒಬ್ಬಳ ಬಟ್ಟೆಯ ಮೇಲೆ ಚೂರು ಐಸ್‌ಕ್ರೀಮ್ ಬಿತ್ತು. ಅದನ್ನು ಅವಳು ಕೈ ಬೆರಳಿನಿಂದ ತೆಗೆದು ಚೀಪಿದಳು. ಅಷ್ಟೇ ರಭಸದಲಿ ವ್ಯಾಕ್ ಅಂತ ಕ್ಯಾಕರಿಸಿ ಪಕ್ಕಕ್ಕೆ ಉಗಿದು ಪಾನಿ ಪಾನಿ ಅಂತ ಮುಖ ಕಿವುಚಿದಳು. ಮೇಲಿಂದ ಹಕ್ಕಿಯೊಂದು ಹಿಕ್ಕೆ ಹಾಕಿದ್ದು ಪಾಪ, ಹುಡುಗಿಗೆ ತಿನ್ನುವ ಮೋಜಿನಲ್ಲಿ ಗೊತ್ತೇ ಆಗಿರಲಿಲ್ಲ.

ಅಲ್ಲೆಲ್ಲ ತಿರುಗಾಡಿ ಹಿಂದಿರುಗಿ ಬರುವಾಗ ಮಾರ್ಗದ ಪಕ್ಕ ನಿಂತಿದ್ದ ಒಬ್ಬ ಪೊಲೀಸ್, ಶೌಖತ್‌ನನ್ನು ಕರೆದು, ಎದುರಿಗಿದ್ದ ವೈನ್ ಶಾಪ್‌ಗೆ ಹೋಗಿ 'ಡಾಕ್ಟರ್ ಬ್ರಾಂಡಿ' ತೆಗೆದುಕೊಂಡು ಬಾ ಅಂತ ಗುಟ್ಟಾಗಿ ಹೇಳಿದ. 'ಯಾಕೆ ನೀನೇ ಹೋಗಬಹುದಲ್ವಾ?' ಎಂದು ಶೌಖತ್ ಕೇಳಿದ್ದಕ್ಕೆ, 'ನಾನು ಡ್ಯೂಟಿಯಲ್ಲಿ ಇದ್ದೇನೆ, ವೈನ್ ಶಾಪ್ ಪಕ್ಕ ಸಿ.ಸಿ ಟಿ.ವಿ. ಕಣ್ಗಾವಲು ಇದೆ' ಎಂದು ಹೇಳಿದ. ಶೌಖತ್ ಅವನ ಕೋರಿಕೆಯಂತೆ ವೈನ್ ಶಾಪ್‌ಗೆ ಹೋಗಿ ಬ್ರಾಂಡಿ ತಂದು ಕೊಟ್ಟ.

ಶೌಖತ್ ಮಾತಿನ ನಡುವೆ 'ನಾನು ಲೋನಾವಾಲ್‌ಗೆ ಹೋಗುತ್ತೇನೆ' ಎಂದು ಹೇಳಿದ. 'ಅಲ್ಲಿ ಕೆಲಸ ಬೇಕಲ್ವ?' ಎಂದು ನಳಿನಿ ಪ್ರಶ್ನಿಸಿದಳು. 'ಹೌದು. ಆದರೆ, ಮ್ಯೂಸಿಯಂನಲ್ಲಿ ನಾನು ಕೆಲಸಕ್ಕೆ ಸೇರುವುದಿಲ್ಲ' ಎಂದು ಹೇಳಿದ. ಬಹಳ ಸಮಯದ ನಂತರ ಇಬ್ಬರೂ ಬಹಳ ಮಾತಾಡಿಕೊಂಡರು. ಪೊಲೀಸ್ ಕ್ಯಾಂಪ್ ಹತ್ತಿರ ಬಂದರು. ತುಸು ದೂರದಿಂದ ನಳಿನಿ ಬೈ... ಬೈ.. ಎನ್ನುತ ಗೇಟಿನಿಂದ ಒಳಗೆ ಹೋದಳು. ಶೌಖತ್ ಅಸಹಾಯಕ ಭಾವದಿಂದ ಹಿಂದಿರುಗಿದ. ಅವನ ಮನಸ್ಸಿನ ಮೂಲೆಯಲ್ಲೆಲ್ಲೋ ನಳಿನಿಯ ಕುರಿತು ಆಪ್ತಭಾವ ಇದ್ದೇ ಇತ್ತು. ಈಗ ಇನ್ನೂ ಏನೋ...

ಅಲ್ಲಿಂದ ಹಿಂದುರಿಗಿದವ ರೈಲ್ವೇ ಸ್ಟೇಷನ್‌ಗೆ ಬಂದು ಕಲ್ಯಾಣಗೆ ಹೋಗಬೇಕೆಂದು ಟೇಕೆಟ್ ಪಡೆದ. ರೈಲಿನ ಒಳಗೆ ಕುಳಿತುಕೊಳ್ಳಲು ಸ್ಥಳವಿರಲಿಲ್ಲ, ನಿಂತುಕೊಂಡ. ವಯಸ್ಸಾದ ಒಬ್ಬ ಸಫಾರಿ ಸೂಟಿನ ವ್ಯಕ್ತಿ ಕಿಟಕಿ ಸೀಟಿನಲ್ಲಿ ಕುಳಿತುಕೊಂಡವನು ಪ್ಲಾಸ್ಟಿಕ್ ಬ್ಯಾಗ್ ಅನ್ನು ತನ್ನ ಕಾಲುಗಳ ನಡುವಿನಲ್ಲಿ ಇಟ್ಟುಕೊಂಡು, ತೊಡೆಯ ಮೇಲೆ ಕರವಸ್ತ್ರ ಇರಿಸಿಕೊಂಡಿದ್ದ. ಅವನ ಪಕ್ಕದವ 'ಪಿಸಾಬ್ ಆತ್ ಹೈ ಕ್ಯಾ' ಎಂದು ಕೇಳಿದ. ಅದಕ್ಕೆ ಆತ 'ಹೀಗೆ ಹೋಗುತ್ತದೆ ಏನು ಮಾಡುವುದು?' ಎಂದು ಅಸಹಾಯಕತೆ ವ್ಯಕ್ತಪಡಿಸಿದ. ಠಾಣೆ ನಿಲ್ದಾಣ ಬಂದಾಗ ಆತ ಎದ್ದು, ಪ್ಲಾಸ್ಟಿಕ್ ಬ್ಯಾಗ್ ಎತ್ತಿಕೊಂಡು ಇಳಿದುಹೋದ. 'ಅರೆ... ಅವನ ಪ್ಲಾಸ್ಟಿಕ್ ಬ್ಯಾಗಿನಲ್ಲಿ ಜಿಂಗಾ (ಚಟ್ಲಿ) ಮತ್ತು ಮೀನು ಇರುತ್ತದೆ. ವಾಸನೆ ಬರುವುದಂತ ಹೀಗೆ ನಾಟಕ ಮಾಡುತ್ತಾನೆ'. ಇದು ಮಾಮೂಲಿ ಎಂಬಂತೆ ಎದುರುಗಡೆ ಕುಳಿತವ ಅಂದ. ಅವನ ಮಾತು ಕೇಳಿ ಎಲ್ಲರೂ ನಗತೊಡಗಿದರು.

ಶೌಖತ್ ಲೋನಾವಾಲ ತಲುಪಿ ಗೆಳೆಯ ಶಶಿಗೆ ಫೋನು ಮಾಡಿದ. 'ಓಹ್ ಶೌಖತ್! ಮುಂಬೈಯಿಂದ ಯಾವಾಗ ಬಂದಿ?' ಶಶಿಕಾಂತ್ ಕೇಳಿದ. 'ಮುಂಬೈಯಲ್ಲಿ ಆರು ತಿಂಗಳು ಕೆಲಸ ಮಾಡಿ, ಈಗ ಲೋನಾವಾಲಕ್ಕೆ ಬಂದಿದ್ದೇನೆ. ಇಲ್ಲಿ ನನಗೊಂದು ಕೆಲಸ ಇದ್ದರೆ ಹೇಳು' ಎಂದು ಹೇಳಿದ. 'ಆದೀತು , ಇಲ್ಲಿ ಪರಿಚಯದ ಒಬ್ಬ ಟೂರಿಸ್ಟ್ ಗೈಡ್ ಇದ್ದಾನೆ, ಅವನಲ್ಲಿ ಕೇಳಿ ಹೇಳುವೆ' ಎಂದು ಶಶಿಕಾಂತ್ ಭರವಸೆ ನೀಡಿದ. ಆ ಸಂಜೆ ಶಶಿಕಾಂತ್ ಮತ್ತು ಶೌಖತ್ ಒಟ್ಟಿಗೆ ಹೋಗಿ ಆ ಗೈಡ್‌ನನ್ನು ಭೇಟಿಯಾದರು. ಹೊಸ ತರಹದ ಕೆಲಸವಾದರೂ, ಗೈಡ್‌ನ ಜೊತೆ ಇದ್ದು ಕಲಿತುಕೊಳ್ಳಬಹುದೆಂದೂ, ಅಲ್ಲಿ ತನಕ ಕಡಿಮೆ ಸಂಬಳ ಸಿಗುವುದೆಂದು ಅವರ ನಡುವೆ ಮಾತುಕತೆಯಾಗಿ, ಶೌಖತ್ ಒಪ್ಪಿಗೆ ನೀಡಿದ. ಈ ವಿಷಯ ನಳಿನಿಗೆ ತಿಳಿಸಿದ. ಆಕೆಗೂ ಖುಷಿ ಆಯಿತು.

ಶೌಖತ್ ಎರಡು ತಿಂಗಳ ನಂತರ ತನ್ನ ಊರಿಗೆ ಹೋದ. ಊರಿನಲ್ಲಿ ಈಗ 'ಬದುಕು ಇಲ್ಲ, ಸಾವೂ ಇಲ್ಲ' ಎಂಬಂತಹ ಪರಿಸ್ಥಿತಿ. ಹೆತ್ತವರ ಮುಖ ದರ್ಶನ ಮಾಡಿಕೊಂಡು ಶೌಖತ್ ವಾಪಾಸ್ ಬಂದ. ಅವನು ಬಂದ ಊರಿನಲ್ಲಿ ತುಂಬಾ ಲಫಾಡ್ ಗಲಾಟೆ ಆಗಿದೆಯಂತೆ. ತಂದೆಯ ಮಟನ್ ಶಾಪ್ ಎಲ್ಲಾ ಸಾಫ್ ಆಗಿದೆಯಂತೆ. ಅದನ್ನು ಕಿತ್ತೆಸೆದು ಧ್ವಂಸ ಮಾಡಲಾಗಿದೆಯಂತೆ. ಅದೇ ಹಳೆಯ ಕೋಮು ವೈಷಮ್ಯ ಈಗೀಗ ವಿಪರೀತ ವಾತಾವರಣ ಸೃಷ್ಟಿ ಮಾಡಿದೆ. ಎಲ್ಲಾ ಕಡೆ ಭಯಭೀತ ವಾತಾವರಣ. ಮನುಷ್ಯ ಮನುಷ್ಯರ ನಡುವೆ ರಕ್ತದಾಹ! ಸರ್ಕಾರ, ವ್ಯವಸ್ಥೆ ಮೌನವಾಗಿರುವುದಾದರೂ ಯಾಕೋ' ಶೌಖತ್ ಖಿನ್ನನಾದ.

ಇದೀಗ ಈ ಕೊರೊನಾ ಮಹಾಮಾರಿ ದೇಶ ವಿದೇಶದಿಂದ ಬಂದು ಪಟ್ಟಣ ಸೇರಿ, ಹಳ್ಳಿ ಹಳ್ಳಿಗಳಲ್ಲೂ ಹರಡುತ್ತಾ ಬಂತಲ್ಲ. ಜಾತಿ, ಧರ್ಮ, ಅಂತಸ್ತಿನ ಹಂಗಿರದೆ ಎಲ್ಲರನ್ನೂ ಸಾವಿನ ತೆಕ್ಕೆಯೊಳಗೆ ಎಳೆದುಕೊಳ್ಳುವ ಕೊರೊನಾ ಮನುಷ್ಯನಿಗೆ ಮಹಾ ಶಿಕ್ಷೆಯೋ? ಲಾಕ್‌ಡೌನ್ ಸಮಯದ ಚಪ್ಪಾಳೆ, ಗಂಟೆ, ಜಾಗಟೆ ಮತ್ತು ಹಚ್ಚಿದ ದೀಪಗಳಿಂದ ಏನೂ ಪ್ರಯೋಜನ ಆದಂತಿಲ್ಲ. ಬದುಕಿನ ಈ ಬವಣೆ ಇನ್ನೂ ಎಷ್ಟು ಸಮಯವೋ ಯಾರಿಗೆ ಗೊತ್ತು.

ಪ್ರತಿಕ್ರಿಯಿಸಿ: **feedback@sudha.co.in**